ದಿನಾಂಕಃ 19.11.2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಭೋದಿಸಲಾಯಿತು.

**ಪಾಟೀಸವಾಲುಃ ಪ್ರತಿವಾದಿಪರ ವಕೀಲರಾದ ಶ್ರೀ ಎಮ್.ಡಿ ಅವರಿಂದ –**

1. ನಾನು ಉಳಿದ ವಾದಿಗಳ ಪರವಾಗಿ ಸಾಕ್ಷಿ ನುಡಿಯುತ್ತಿರುವುದಿಲ್ಲ. ಗೆಂಡಮಂಚಯ್ಯ ಅವರು ನಾವು ಚಿಕ್ಕವರಿದ್ದಾಗಲೆ ತೀರಿಕೊಂಡಿರುತ್ತಾರೆ. ಯಾವಾಗ ನನಗೆ ಗೊತ್ತಿಲ್ಲ. ಗೆಂಡಮಂಚಯ್ಯನ ಹೆಂಡತಿ ಹೆಸರು ಮಂಚಮ್ಮ. ಸದರಿಯವರ ಹೆಂಡತಿ ಮಂಚಮ್ಮ ಎಂದು ತೋರಿಸಲು ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿಲ್ಲ. ಗೆಂಡಮಂಚಯ್ಯ ಅವರಿಗೆ ಇಬ್ಬರು ಗಂಡು ಮಕ್ಕಳು 1. ಕೆಂಗ 2. ಕರಿಯಯ್ಯ ಎಂದರೆ ಸರಿ.

2. ಕೆಂಗ ಎಂಬುವವರು ತಮ್ಮ ಜೀವಿತ ಅವಧಿಯಲ್ಲಿ ಮದುವೆ ಮಾಡಿಕೊಂಡಿರುವುದಿಲ್ಲ. ಕರಿಯಯ್ಯ ಅವರು ಯಾವಾಗ ತೀರಿಹೋಗಿರುತ್ತಾರೆ ನನಗೆ ಗೊತ್ತಿಲ್ಲ. ಕರಿಯಯ್ಯ ಅವರಹೆಂಡತಿ ಹೆಸರು ಚೌಡಮ್ಮ. ಕರಿಯಯ್ಯ ಅವರಿಗೆ ಸಿದ್ದಯ್ಯ @ಗೆಂಡೆಮಂಚಯ್ಯನ ಸಿದ್ದ ಎಂಬ ಒಬ್ಬನೇ ಮಗ ಎಂದರೆ ಸರಿಯಲ್ಲ. ಇಬ್ಬರು ಮಕ್ಕಳು ಎಂದು ಸಾಕ್ಷಿ ನುಡಿಯುತ್ತಾರೆ. ಕರಿಯಯ್ಯ ಅವರಿಗೆ 3 ಜನ ಹೆಣ್ಣು ಮಕ್ಕಳು ಎಂದರೆ ಸರಿ. 1.ಸಣ್ಣಮ್ಮ 2.ಮೋಟಮ್ಮ 3. ಬುಡಾಕಮ್ಮ ಎಂದರೆ ಸರಿ.

3. ಸಿದ್ದಯ್ಯನ ಹೆಂಡತಿ ಹೆಸರು ಡಂಡಮ್ಮ @ ಕಾಳಮ್ಮ ಎಂದರೆ ಸರಿ. ಸಿದ್ದಯ್ಯನಿಗೆ 5 ಜನ ಗಂಡು ಮಕ್ಕಳು ಎಂದರೆ ಸರಿಯಲ್ಲ. 4 ಜನ ಗಂಡು ಮಕ್ಕಳು. ಸಿದ್ದಯ್ಯನಿಗೆ 3 ಜನ ಹೆಣ್ಣು ಮಕ್ಕಳು ಎಂದರೆ ಸರಿಯಲ್ಲ. ಎರಡು ಜನ ಹೆಣ್ಣು ಮಕ್ಕಳು. ಅವರು 1. ಸಣ್ಣಮಂಜಮ್ಮ 2. ಪುಟ್ಟಸಿದ್ದಮ್ಮ 3.ಮರಿಸಿದ್ದಮ್ಮ ಎಂದರೆ ಸಣ್ಣಮಂಜಮ್ಮ ತಿಮ್ಮಯ್ಯನ ಮಗಳು ಎಂದು ಸಾಕ್ಷಿ ನುಡಿಯುತ್ತಾರೆ. ಸಣ್ಣಮಂಜಮ್ಮ ಈ ದಾವೆಯ 12 ನೇ ಪ್ರತಿವಾದಿ ಎಂದರೆ ಸರಿ. ಅವರು ಈಗ ತೀರಿಹೋಗಿರುತ್ತಾರೆ ಎಂದು ಸಾಕ್ಷಿ ಸ್ವತಃ ನುಡಿಯುತ್ತಾರೆ. ಸದರಿಯವರ ಗಂಡ ಹಾಗೂ ಮಕ್ಕಳನ್ನು ಪ್ರಸ್ತುತ ದಾವೆಯಲ್ಲಿ ಪಕ್ಷಗಾರರಾಗಿ ಸೇರಿಸಿರುವುದಿಲ್ಲ ಎಂದರೆ ಸರಿ.

4. ಪುಟ್ಟಸಿದ್ದಮ್ಮ ಚಿಕ್ಕಾಡಗನಹಳ್ಳಿ ಗ್ರಾಮದಲ್ಲಿ ವಾಸವಾಗಿದ್ದಾರೆ ಎಂದರೆ ಸರಿ. ಪುಟ್ಟಸಿದ್ದಮ್ಮ ಅವರನ್ನು ನಾವು ಪಿಟ್ಟಮ್ಮ ಎಂದು ಕರೆಯುತ್ತಿದ್ದೇವು. ಸದರಿಯವರನ್ನು ಪ್ರಸ್ತುತ ದಾವೆಯಲ್ಲಿ ಪಕ್ಷಗಾರರಾಗಿ ಸೇರಿಸಿರುವುದಿಲ್ಲ ಎಂದರೆ ಸರಿ. ಸದರಿಯವರನ್ನು ಪಕ್ಷಗಾರರಾಗಿ ಮಾಡಲು ನನಗೆ ತೊಂದರೆ ಇಲ್ಲ ಎಂದರೆ ಸರಿ.

5. ಸಿದ್ದಯ್ಯನ 3 ನೇ ಮಗಳು ಮರಿಸಿದ್ದಮ್ಮ ಈಗ ತೀರಿಹೋಗಿರುತ್ತಾರೆ ಎಂದರೆ ಸರಿ. ಸದರಿ ಮರಿಸಿದ್ದಮ್ಮ ಗಂಡ ಹಾಗೂ ಮಕ್ಕಳನ್ನು ಪ್ರಸ್ತುತ ದಾವೆಯಲ್ಲಿ ಪಕ್ಷಗಾರರಾಗಿ ಸೇರಿಸಿರುವುದಿಲ್ಲ ಎಂದರೆ ಸರಿ.

6. ನಾನು ವಾದಪತ್ರದ 2 ನೇ ಪ್ಯಾರಾದಲ್ಲಿ ನುಡಿದಿರುವ ವಂಶವೃಕ್ಷದ ಅಂಶಗಳಿಗೆ ಸಂಬಂಧಪಟ್ಟಂತೆ ರುಜುವಾತು ಪಡಿಸಲು ದಾಖಲಾತಿಗಳನ್ನು ಹಾಜರುಪಡಿಸಿರುತ್ತೇನೆ. ನಾನು ಹಾಜರುಪಡಿಸಿರುವ ಇಂಡೆಕ್ಸ್ ಆಫ್ ಲ್ಯಾಂಡ್ಸ್ , ರೆಕಾರ್ಡ್ ಆಫ್ ರೈಟ್ಸ್ ಹೊರತು ಪಡಿಸಿ ನಾನು ಬೇರೆ ವಂಶವೃಕ್ಷಕ್ಕೆ ಸಂಬಂಧಪಟ್ಟ ದಾಖಲಾತಿಗಳನ್ನು ಹಾಜರುಪಡಿಸಿರುತ್ತೀರಾ ಎಂದರೆ ನಾವು ವಕೀಲ ಸಾಹೇಬರ ಬಳಿ ನೀಡಿದ್ದೇನೆ ಎಂದು ಸಾಕ್ಷಿ ನುಡಿಯುತ್ತಾರೆ.

7. ಐಟಂ ನಂ.1 ಸರ್ವೇ ನಂ. 22/1 ರಲ್ಲಿ 34 ಗುಂಟೆ ಜಮೀನು ಮೂಲತಃ ಕೆಂಗ ಅವರಿಗೆ ಸೇರಿದ ಸ್ವತ್ತು ಎಂದರೆ ಸರಿ. ಅದೇ ರೀತಿ ಐಟಂ ನಂ.3 ಸರ್ವೇ ನಂ.22/3 ರಲ್ಲಿ 11 ಗುಂಟೆ ಜಮೀನು ಸಹ ಕೆಂಗ ಅವರಿಗೆ ಸೇರಿದ ಸ್ವತ್ತು ಎಂದರೆ ನಾನು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ಅದೇ ರೀತಿ ಸರ್ವೇ ನಂ. 22/2 ಬಿ ಕರಿಯಯ್ಯ ಅವರಿಗೆ ಸೇರಿದ ಸ್ವತ್ತು ಎಂದರೆ ಸರಿ. ಅದೇ ರೀತಿ ಸರ್ವೇ ನಂ. 41/1 ಬಿ ಕರಿಯಯ್ಯ ಅವರಿಗೆ ಸೇರಿದ ಸ್ವತ್ತು ಎಂದರೆ ಸರಿ.

8. ಕೆಂಗ ಅವರು ಮದುವೆ ಆಗದ ಕಾರಣ, ಕೆಂಗ ಹಾಗೂ ಕರಿಯ್ಯ 1981-82 ರಲ್ಲಿ ಸಿದ್ದಯ್ಯನ ಮಕ್ಕಳು 4 ಐಟಂ ಸ್ವತ್ತುಗಳನ್ನು ವಿಭಾಗ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ.

1981-82 ರಿಂದ ವಿಭಾಗದಂತೆ ಸದರಿಯವರು ಖಾತೆ ಬದಲಾವಣೆ ಮಾಡಿಕೊಂಡಿದ್ದಾರೆ ಎಂದರೆ ಸರಿಯಲ್ಲ. ವಿಭಾಗದ ಪ್ರಕಾರ ಖಾತೆ ಬದಲಾವಣೆ ಆಗಿಲ್ಲ ನಾವು ಕೇವಲ ಕಣ್ಣು ಗುರುತಿಗಾಗಿ ಖಾತೆ ಬದಲಾವಣೆ ಮಾಡಿಕೊಂಡಿರುತ್ತೇವೆ.

9. ಸದರಿ ವಿಭಾಗ ಪ್ರಕಾರ ಸರ್ವೇ ನಂ. 22/1 ರಲ್ಲಿ 6 ¾ ಗುಂಟೆ ಸರ್ವೇ ನಂ.22/2 ಬಿ ರಲ್ಲಿ 9 ¾ ಗುಂಟೆ, ಸರ್ವೇ ನಂ.22/3 ರಲ್ಲಿ 2 1/4 ಗುಂಟೆ, ಸರ್ವೇ ನಂ. 41/1 ಬಿ ರಲ್ಲಿ 14 ಗುಂಟೆ ಜಮೀನುಗಳು ಸಣ್ಣತಮ್ಮಯ್ಯ ಅವರ ಹಿಸ್ಸೆಗೆ ಬಂದ ಜಮೀನುಗಳು ಎಂದರೆ ಸುಳ್ಳು.

10. ಅದೇ ಪ್ರಕಾರ ಸರ್ವೇ ನಂ. 22/1 ರಲ್ಲಿ 6 ¾ ಗುಂಟೆ, ಸರ್ವೇ ನಂ.22/2 ಬಿ ರಲ್ಲಿ 9 ¾ ಗುಂಟೆ, ಸರ್ವೇ ನಂ.22/3 ರಲ್ಲಿ 2 ¼ ಗುಂಟೆ, ಸರ್ವೇ ನಂ. 41/1 ಬಿ ರಲ್ಲಿ 14 ಗುಂಟೆ ಜಮೀನುಗಳು ನನ್ನ ತಂದೆ ಕಿವುಡಯ್ಯ ಅವರಿಗೆ ಬಂದ ಜಮೀನುಗಳು ಎಂದರೆ ನಾನು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ಜಂಜರ್ 225 ಸ್ವತ್ತು ಸಂ.259 ರ ಮನೆ ಸಹ ನನ್ನ ತಂದೆ ಕಿವುಡಯ್ಯ ಅವರಿಗೆ ಬಂದ ಸ್ವತ್ತು ಎಂದರೆ ಸುಳ್ಳು .

11. ಅದೇ ಪ್ರಕಾರ ಸರ್ವೇ ನಂ. 22/1 ರಲ್ಲಿ 7 ಗುಂಟೆ, ಸರ್ವೇ ನಂ.22/2 ಬಿ ರಲ್ಲಿ 10 ಗುಂಟೆ, ಸರ್ವೇ ನಂ.22/3 ರಲ್ಲಿ 2 ಗುಂಟೆ, ಸರ್ವೇ ನಂ. 41/1 ಬಿ ರಲ್ಲಿ 14 ಗುಂಟೆ ಜಮೀನುಗಳು ಜಂಜರ್ 302/ಎ ಮತ್ತು ಬಿ ಸ್ವತ್ತು ಸಂ.338 ರ ಮುಳುಕ್ಲಾರು ಗ್ರಾಮದಲ್ಲಿರುವ ಮನೆ ಕುನ್ನಯ್ಯಅವರ ಹಿಸ್ಸೆಗೆ ಬಂದ ಸ್ವತ್ತು ಎಂದರೆ ಸುಳ್ಳು. ಅದರಲ್ಲಿ ನನಗೂ ಕೂಡ ಭಾಗ ಬರಬೇಕು ಎಂದು ಸಾಕ್ಷಿ ನುಡಿಯುತ್ತಾರೆ.

12. ಅದೇ ಪ್ರಕಾರ ಸರ್ವೇ ನಂ. 22/1 ರಲ್ಲಿ 6 ¾ ಗುಂಟೆ, ಸರ್ವೇ ನಂ.22/2 ಬಿ ರಲ್ಲಿ 9 ¾ ಗುಂಟೆ, ಸರ್ವೇ ನಂ.22/3 ರಲ್ಲಿ ಗುಂಟೆ, ಸರ್ವೇ ನಂ. 41/1 ಬಿ ರಲ್ಲಿ 14 ಗುಂಟೆ ಜಮೀನುಗಳು ಪುಟ್ಟರಾಜಯ್ಯ ಅವರ ಹಿಸ್ಸೆಗೆ ಬಂದ ಸ್ವತ್ತು ಎಂದರೆ ಸುಳ್ಳು.

**13.** ಅದೇ ಪ್ರಕಾರ ಸರ್ವೇ ನಂ. **22/1** ರಲ್ಲಿ **6 ¾** ಗುಂಟೆ, ಸರ್ವೇ ನಂ.**22/2** ಬಿ ರಲ್ಲಿ **9 ¾** ಗುಂಟೆ, ಸರ್ವೇ ನಂ.**22/3** ರಲ್ಲಿ **2 ¼** ಗುಂಟೆ, ಸರ್ವೇ ನಂ. **41/1** ಬಿ ರಲ್ಲಿ **14** ಗುಂಟೆ ಜಮೀನುಗಳು ಸ್ವಾಮಯ್ಯ ಅವರ ಹಿಸ್ಸೆಗೆ ಬಂದ ಸ್ವತ್ತು ಎಂದರೆ ಸುಳ್ಳು.

14. ನಾನು ಹಾಜರುಪಡಿಸಿರುವ ನಿಪಿ.1, 2 ರಲ್ಲಿ ಅದರಂತೆ ಹಿಸ್ಸೆ ಆದವರ ಹೆಸರುಗಳನ್ನು ನಮೂದು ಮಾಡಲಾಗಿದೆ ಎಂದರೆ ನಮ್ಮ ತಾಯಿಯವರಿಗೆ ಗೊತ್ತಾಗದಂತೆ ಅವರು ನಮೂದು ಮಾಡಿಸಿರುತ್ತಾರೆ. ನಾನು ಹಾಜರುಪಡಿಸಿರುವ ಆರ್ ಟಿ ಸಿಗಳು ಮೇಲೆ ಹೇಳಿದಂತ 5 ಜನರಿಗೂ ಸಹ 4 ಸರ್ವೇ ನಂಬರ್ ಗಳಲ್ಲಿ ಸಮಭಾಗ ಹಿಸ್ಸೆ ಆಗಿರುತ್ತದೆ ಎಂದರೆ ಸರಿಯಲ್ಲ. ಸದರಿ ಆರ್ ಟಿ ಸಿಗಳಲ್ಲಿ ನಮೂದು ಇರುವ ಹಾಗೇ ನಾವು ಕಂದಾಯ ಕಟ್ಟಿಕೊಂಡು ಬಂದಿರುತ್ತೇವೆ ಎಂದರೆ ಸರಿಯಲ್ಲ.

15. 1981-82 ರಿಂದ ನಮೂದನೆ ಇರುವ ದಾಖಲೆಗಳನ್ನು ನಾವು ಕಂದಾಯ ಇಲಾಖೆಯಲ್ಲಿ ಪ್ರಶ್ನಿಸಿಲ್ಲ ಎಂದರೆ ಸರಿ. ನ್ಯಾಯಾಲಯದಲ್ಲಿ ತೀರ್ಮಾನವಾಗಲಿ ಎಂದು ಈ ದಾವೆ ಸಲ್ಲಿಸಿರುತ್ತೇವೆ ಎಂದು ಸಾಕ್ಷಿ ನುಡಿಯುತ್ತಾರೆ. ಸುಮಾರು 40 ವರ್ಷಗಳ ಹಿಂದೆಯೆ ನನ್ನ ತಂದೆ ಪೌತಿ ಆಗಿರುತ್ತಾರೆ. ಸದರಿ 40 ವರ್ಷಗಳ ಒಳಗೆಯೆ ದಾವಾ ಜಮೀನುಗಳು ನನ್ನ ತಂದೆ ಹೆಸರಿಗೆ ಖಾತೆ ಆಗಿದ್ದವು ಎಂದರೆ ಸರಿಯಲ್ಲ. ಅವರ ಪೌತಿ ಆಧಾರದ ಮೇಲೆ ವಾದಿ 1 ನನ್ನ ತಾಯಿಯ ಹೆಸರಿಗೆ ನನ್ನ ತಂದೆಯ ಹಿಸ್ಸೆಗೆ ಬಂದ ಜಮೀನುಗಳಿಗೆ ಸಂಬಂಧಪಟ್ಟಂತೆ ಖಾತೆ ಬದಲಾವಣೆ ಆಗಿತ್ತು ಎಂದರೆ ನನ್ನ ತಾಯಿಗೆ ಈ ವಿಷಯ ಗೊತ್ತಿರಲಿಲ್ಲ ಎಂದು ಸಾಕ್ಷಿ ನುಡಿಯುತ್ತಾರೆ.

16. ಪಂಚಾಯತಿ ಖಾತೆ ಮನೆಯನ್ನು ನಾನು ಪ್ರಸ್ತುತ ದಾವೆಯಲ್ಲಿ ಸೇರಿಸಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಹೇಳುತ್ತಿರುವ ಜಂಜರ್ ಹಾಗೂ ಸ್ವತ್ತಿನ ನಂಬರ್ ಮನೆಯನ್ನು ಪ್ರಸ್ತುತ ದಾವೆಯಲ್ಲಿ ಸೇರಿಸಿರುವುದಿಲ್ಲ ಎಂದರೆ ಸರಿಯಲ್ಲ. ಜಂಜರ್ ನಂಬರ್ 225 ಸ್ವತ್ತು 259 ಮುಳ್ಳೂರು ಗ್ರಾಮದಲ್ಲಿರುವ ಮನೆ ನಮ್ಮ ಹೆಸರಿಗೆ ಬಂದ ಮನೆಯನ್ನು ಪ್ರಸ್ತುತ ದಾವೆಯಲ್ಲಿ ಸೇರಿಸಿರುವುದಿಲ್ಲ ಎಂದರೆ ಭಾಗವೇ ಆಗಿಲ್ಲ ಎಂದು ಸಾಕ್ಷಿ ನುಡಿಯುತ್ತಾರೆ. **1982** ರಲ್ಲಿ ವಿಭಾಗ ಆಗಿ ಖಾತೆ

ಆಗಿರುತ್ತದೆ ಅದರಂತೆ ಸದರಿಯವರು ಸ್ವಾಧೀನ ಹೊಂದಿದ್ದು ಆ ಪ್ರಕಾರ ಖಾತೆ ಬದಲಾವಣೆ ಮಾಡಿಕೊಂಡಿದ್ದಾರೆ ಎಂದರೆ ಭಾಗವೇ ಆಗಿಲ್ಲ ಎಂದು ಸಾಕ್ಷಿ ನುಡಿಯುತ್ತಾರೆ.

17. ನಾನು ಕರಿಯಯ್ಯ ಅವರಿಗೆ ಇಬ್ಬರು ಗಂಡು ಎಂದು ತೋರಿಸಲು ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನಾನು ಕರಿಯಯ್ಯನಿಗೆ ತಿಮ್ಮಯ್ಯ ಎಂಬ ಮಗ ಇದ್ದ ಎಂದು ದುರುದ್ದೇಶದಿಂದ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ತಿಮ್ಮಯ್ಯ ಅವರಗೆ ಲಿಂಗಮ್ಮ ಎಂಬ ಹೆಂಡತಿ ಇದ್ದಾರೆ ಎಂದು ತೋರಿಸಲು ದಾಖಲಾತಿಗಳನ್ನು ಕೊಟ್ಟಿದ್ದೀರಾ ಎಂದರೆ ವಂಶವೃಕ್ಷ ಹಾಜರುಪಡಿಸಿದ್ದೇನೆ ಎಂದು ಸಾಕ್ಷಿ ನುಡಿಯುತ್ತಾರೆ.

**18.** ತಿಮ್ಮಯ್ಯ ನಾನು ಚಿಕ್ಕವನಿದ್ದಾಗೆ ತೀರಿಹೋಗಿರುತ್ತಾರೆ. ಲಿಂಗಮ್ಮ ಯಾವಾಗ ತೀರಿಹೋಗಿರುತ್ತಾರೆ ನನಗೆ ಗೊತ್ತಿಲ್ಲ. ತಿಮ್ಮಯ್ಯ ಮತ್ತು ಲಿಂಗಮ್ಮ ಅವರಿಗೆ ಕಿವುಡಯ್ಯ ಎಂಬ ಒಬ್ಬನೆ ಮಗ ಎಂದು ನಾನು ಸುಳ್ಳು ಹೇಳಿ ಬರೆಯಿಸಿರುತ್ತೇನೆ ಎಂದರೆ ಸರಿಯಲ್ಲ. ಸಿದ್ದಯ್ಯನ ಎರಡನೇ ಮಗ ಕಿವುಡಯ್ಯ ಎಂದರೆ ಸರಿಯಲ್ಲ. ತಿಮ್ಮಯ್ಯ ಮತ್ತು ಲಿಂಗಮ್ಮ ಮತ್ತು ಅವರಿಗೆ ಒಬ್ಬನೆ ಮಗ ಕಿವುಡಯ್ಯ ಎಂದು ತೋರಿಸಲು ಯಾವುದೇ ದಾಖಲಾತಿಗಳನ್ನು ಹಾಜರುಪಡಿಸದೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ: ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.,

(ಶಿರಿನ ಜಾವೀದ್ ಅನ್ಸಾರಿ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ, ಹುಣಸೂರು.